ಇದ್ದಾರೆ. ಆದ್ದರಿಂದ ಆ ವಿವರಗಳು ಸರಕಾರದಲ್ಲಿ ಇರುತ್ತವೆ. ಆದರೂ ಮಂತ್ರಿಗಳು ಅದನ್ನು ಇಲ್ಲ ಎಂದು ಹೇಳುತ್ತಿದ್ದಾರೆ. ಈಗಲಾದರೂ ಅದರ ಬಗ್ಗೆ ನೋಡಿ, ಅದನ್ನು ತರಿಸಿಕೊಂಡು ಈ ಮನೆಯಲ್ಲಿ ಒಂದು ಸಮರ್ಪಕವಾದ ಉತ್ತರ ಕೊಡಬೇಕು. ಅಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಮಂತ್ರಿಗಳು ಈಗಲಾದರೂ ಸೂಚನೆ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೇ, ೬ ವರ್ಷದಿಂದ ೧೨ ವರ್ಷದೊಳಗಿನ ಬಾಲಕರು ಯಾರೂ ಅಲ್ಲಿ ಕೆಲಸ ಮಾಡುತ್ತಿಲ್ಲ.

ಅಧ್ಯಕ್ಷರು.— ಈಗ ತಾವು ಸರ್ವೆ ಮಾಡಿಲ್ಲವೆಂದು ಹೇಳಿದಿರಿ. ಈಗ ಇದು ಹೇಗೆ ತಮಗೆ ಗೊತ್ತಾಯಿತು?

ಶ್ರೀ ಬಿ. ಶಿವಣ್ಣ.— ನಮ್ಮ ಲೇಬರ್ ಇನ್ಸ್‌ಪೆಕ್ಟರ್ಸ್ ಇನ್ಸ್‌ಪೆಕ್ಷನ್ ಮಾಡಿದ ಇನ್ಸ್‌ಪೆಕ್ಷನ್ ರಿಪೋರ್ಟ್ಸ್ ಇವೆ ಈ ಬಗ್ಗೆ ಮಾನ್ಯ ಸದಸ್ಯರು ಬೇಕಾದರೆ ಅರ್ಧಗಂಟೆ ಕಾಲದ ಚರ್ಚೆಗೆ ಒಪ್ಪಿದರೆ, ನಾನು ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.— ಅದೇನು ಬೇಡ. ಈಗ ಬಂದಿರತಕ್ಕಂಥ ಪ್ರಶ್ನೆಯಂ ಆಧಾರದ ಮೇಲೆ ಸರ್ವೆ ಮಾಡುವುದು ವಿಹಿತವೆಂದು ನಿಮಗೆ ಅನಿಸುತ್ತದೆಯೇ ?

ಶ್ರೀ ಬಿ. ಶಿವಣ್ಣ.— ಈಗ ಅನಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಬಗ್ಗೆ

೩೦೫. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್).— ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿಸಿದವರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ವೈದ್ಯರು, ಸ್ನಾತಕೋತ್ತರ ಪದವೀಧರರು, ಇಂಜಿನೀಯರ್, ಕುಶಲಕರ್ಮಿಗಳು, ಅವಿದ್ಯಾವಂತರ ಸಂಖ್ಯೆ ಎಷ್ಟು ?

ಇ) ಯೋಜಿತ ಮಂಗಳೂರು ತೈಲಾಗಾರ, ನಂದಿಕೂರು ವಿದ್ಯುತ್ ಸ್ಥಾವರಗಳ ಉದ್ಯೋಗಗಳಲ್ಲಿ ಶೇಕಡ ೧೦೦ ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ಹಾಗೂ ಮಂಗಳೂರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತ ನಿರುದ್ಯೋಗಿಗಳಿಗೆ ಆದ್ಯತೆ ನೀಡಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

ಅ) ೬೩,೦೧೧.

ಆ)

ವೈದ್ಯಕೀಯ ಪದವೀಧರರು	...	೩೪
ಸ್ನಾತಕೋತ್ತರ ಪದವೀಧರರು	...	೫೫೯
ಇಂಜಿನಿಯರಿಂಗ್ ಪದವೀಧರರು	...	೩೭೬
ಕುಶಲ ಕರ್ಮಿಗಳು	...	೨೬೭೨
ಅವಿದ್ಯಾವಂತರು	...	೧೯,೭೪೭

ಇ) ಕೇಂದ್ರ/ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿನ ಗರಿಷ್ಠ ಮೂಲ ವೇತನ ರೂ. ೧೨೫೦-೦೦ (ಹಿಂದಿನ ವೇತನ ಶ್ರೇಣಿ) ಇರುವ ಹುದ್ದೆಗಳನ್ನು ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರವೇ ಭರ್ತಿಮಾಡಬೇಕಾಗಿರುತ್ತದೆ. ಆದರೆ ಹೆಚ್ಚಿನ ಮೂಲವೇತನದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಮ್ಮ ಪ್ರಮುಖವಾದ ಮಂಗಳೂರು ತೈಲಾಗಾರ ಮತ್ತು ನಂದಿಕೂರು ವಿದ್ಯುತ್ ಸ್ಥಾವರಗಳಲ್ಲಿ ಇರುವ ಹುದ್ದೆಗಳನ್ನು ನೇರವಾಗಿ

ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಅಲ್ಲಿನ ಸ್ಥಳೀಯರಿಗೆ ಮತ್ತು ಅಲ್ಲಿ ಈ ಸ್ಥಾವರಗಳಿಗೆ ಸ್ಥಳವನ್ನು ಕೊಟ್ಟಂತಹವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತೀರಾ ?

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಅಲ್ಲಿನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಸುಮಾರು ೦ ೬೩೦೧೧ ಜನ ಅಭ್ಯರ್ಥಿಗಳು ಹೆಸರನ್ನು ನೋಂದಾಯಿಸಿ ಕೊಂಡಿದ್ದಾರೆ. ಅದರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಸುಮಾರು ೧೯೮೬೫. ಇವತ್ತು ಒಟ್ಟು ದಾಖಲಾಗಿರುವ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಡಿಗ್ರಿ ಆದವರು, ಪೋಸ್ಟ್ ಗ್ರ್ಯಾಜುಯೇಟ್ಸ್ ಆದವರು ಹಾಗೂ ಇನ್ನಿತರೆ ಪದವೀಧರರನ್ನು ವಿಂಗಡಣೆ ಮಾಡಿದಾಗ ಪೋಸ್ಟ್ ಗ್ರ್ಯಾಜುಯೇಟ್ಸ್ ೧೩೩೧ ಜನ ಗ್ರ್ಯಾಜುಯೇಟ್ಸ್ ೬೯೬೩ ಜನ. ಐ.ಟಿ.ಐ. ಆದವರು ೧೩೦೦ ಜನ ಎಸ್‌ಎಸ್‌ಎಲ್‌ಸಿ ಪಾಸಾದವರು ೩೩೬೩೫ ಜನ ಎಸ್‌ಎಸ್‌ಎಲ್‌ಸಿ ಫೇಲ್ ಆದವರು ೧೧೭೨೧ ಜನ, ಅಕ್ಷರಸ್ಥರು ೮೦೨೬ ಜನ ಅನಕ್ಷರಸ್ಥರು ೬೩೧೧ ಜನ ಹೀಗೆ ಒಟ್ಟು ೬೩೦೧೧ ಜನ ತಮ್ಮ ಹೆಸರುಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೊಂದಾಯಿಸಿಕೊಂಡಿದ್ದಾರೆ. ಇದರ ಜೊತೆಗೆ ಕೆಲವು ಜನ ಪೋಸ್ಟ್ ಗ್ರ್ಯಾಜುಯೇಟ್ಸ್ ಆದವರು ತಮ್ಮ ಹೆಸರುಗಳನ್ನು ಬೆಂಗಳೂರಿನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಸಹ ನೋಂದಾಯಿಸಿದ್ದಾರೆ ಮಾನ್ಯ ಸದಸ್ಯರು ಹೇಳಿದಂತೆ ಇಲ್ಲಿ ನೇರ ನೇಮಕಾತಿ ಮಾಡಿಕೊಳ್ಳಬೇಕಾದರೆ ಬೇಸಿಕ್ ೧೫೫೦ ರೂಪಾಯಿಗಳ ಒಳಗಡೆ ಇರುವಂತಹ ಹುದ್ದೆಗಳಿಗೆ ಮಾತ್ರ ನೇಮಕ ಮಾಡಿಕೊಳ್ಳಬಹುದು ಇನ್ನುಳಿದ ಹುದ್ದೆಗಳ ನೇಮಕಾತಿಯನ್ನು ಕೇಂದ್ರ ಸರ್ಕಾರ ದವರೇ ಮಾಡಿಕೊಳ್ಳುತ್ತಾರೆ. ಇದರಿಂದ ನಾವು ಸ್ಥಳೀಯರಿಗೆ ನೂರು ಪರ್ಸೆಂಟ್ ಉದ್ಯೋಗಗಳನ್ನು ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳಿಂದ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ವಿಜಯಕುಮಾರ ಶೆಟ್ಟಿ.—ಅಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಬದಲಿ ಉದ್ಯೋಗ ಕೊಡಬೇಕಲ್ಲವೇ ?

ಶ್ರೀ ಬಿ. ಶಿವಣ್ಣ.—ಹಾಗೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಿಜಯಕುಮಾರ ಶೆಟ್ಟಿ.—ಈ ಜಾಗವನ್ನು ನೋಟಿಫೈ ಮಾಡಿ ಸುಮಾರು ೧೫ ವರ್ಷಗಳು ಆಯಿತು. ಆದರೂ ಈ ವಿರಿಯಾದಲ್ಲಿ ಯಾವುದೇ ಡೆವಲಪ್‌ಮೆಂಟ್ ವರ್ಕ್ಸ್ ಅನ್ನು ಮಾಡಿಲ್ಲ. ದಯವಿಟ್ಟು ಇಲ್ಲಿ ಯಾವಾಗ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಶಿವಣ್ಣ.—೧೯೭೯ ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಿಂದ ಸುಮಾರು ೬೩೮ ಜನರಿಗೆ ಉದ್ಯೋಗ ಒದಗಿಸಿಕೊಡಲಾಗಿದೆ. ಮಾನ್ಯ ಸದಸ್ಯರ ಇನ್ನೊಂದು ಪ್ರಶ್ನೆ ನನ್ನ ಇಲಾಖೆಗೆ ಬರುವುದಿಲ್ಲ.

ಶ್ರೀ ವಿಜಯ ಕುಮಾರ ಶೆಟ್ಟಿ.—ಈ ಜಾಗವನ್ನು ನೋಟಿಫೈ ಮಾಡಿದ್ದು ಯಾವಾಗ ? ಅಲ್ಲಿ ಸುಮಾರು ೧೭೦೦ ಎಕರೆ ಜಮೀನನ್ನು ನೋಟಿಫೈ ಮಾಡಿದರು. ಆದರೆ ಅಲ್ಲಿನ ಜಿಲ್ಲಾಪಂಚಾಯತ್ ಪತಿಯಿಂದ ಯಾವುದೇ ಅಭಿವೃದ್ಧಿ ಕೆಲಸ ಆ ಜಾಗದಲ್ಲಿ ಆಗಿಲ್ಲ.

ಶ್ರೀ ಬಿ. ಶಿವಣ್ಣ.—ಇದು ನನ್ನ ಇಲಾಖೆಗೆ ಸಂಬಂಧಪಟ್ಟಿಲ್ಲವೆಂದು ಹೇಳಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ್.—ಮಾನ್ಯ ಅಧ್ಯಕ್ಷರೇ, ಈ ಥರ್ಮಲ್ ಪ್ಲಾಂಟ್ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿ ಕೊಳ್ಳುವುದೇನೆಂದರೆ, ಅಲ್ಲಿ ಕೃಷಿಕರದ್ದು ಸಾವಿರಾರು ಎಕರೆ ಜಮೀನು ಹೋಗುತ್ತಿದೆ. ಸಣ್ಣ ಸಣ್ಣ ಹುದ್ದೆಗಳಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ಹೆಸರುಗಳನ್ನು ತರಿಸಿಕೊಂಡು ಕೆಲಸ ಕೊಡಲಾಗುತ್ತಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, ಯಾರ ಯಾರ ಜಮೀನು ಹೋಗುತ್ತದೆಯೋ ಅಂಥಾ ಕುಟುಂಬ ವರ್ಗದವರುಗಳಿಗೆ ಒಂದೊಂದು ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗವಕಾಶವನ್ನು ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಪಡಿಸುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ.—ಈ ಕ್ಷೇತ್ರದಲ್ಲಿ ೧೫ ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯ ಕ್ರಮಗಳು ಆಗುತ್ತಿಲ್ಲ. ಅಲ್ಲಿನ ಜನರು ಸಂಕಟ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕೋಸ್ಕರ ಈ ಯೋಜನೆ ಯನ್ನು ಯಾವಾಗ ಪ್ರಾರಂಭ ಮಾಡುತ್ತೀರಾ ಎಂದು ದಯವಿಟ್ಟು ತಿಳಿಸಬೇಕು.

ಸಭಾಧ್ಯಕ್ಷರು.—ನೀವು ಕೇಳುತ್ತಿರುವುದು ಮಂಗಳೂರು ರಿಫೈನರಿ ಪ್ರಾಜೆಕ್ಟ್ ಬಗ್ಗೆನಾ ?

ಶ್ರೀ ವಿಜಯಕುಮಾರ್ ಶೆಟ್ಟಿ.—ಹೌದು.

ಅಧ್ಯಕ್ಷರು.—ಮಂಗಳೂರು ರೀಫೈನರಿ ಪ್ರಾಜೆಕ್ಟ್ ಗೌರ್ನಮೆಂಟ್ ಆಫ್ ಇಂಡಿಯಾಗೆ ಸಂಬಂಧ ಪಟ್ಟದ್ದು, ಈ ಸಚಿವರನ್ನು ತಾವು ಕೇಳಿದರೆ ಇವರು ಹೇಗೆ ಉತ್ತರ ಕೊಡುತ್ತಾರೆ ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳುತ್ತಾರೆಯೇ ?

ಶ್ರೀ ಬಿ. ಶಿವಣ್ಣ —ಆದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವುದು ನನಗೆ ಸಂಬಂಧ ಪಟ್ಟ ರಾಜ್ಯದ ಲೇಬರ್ ಡಿಪಾರ್ಟ್‌ಮೆಂಟಿನದು ಮಾತ್ರ.

ಶ್ರೀ ಎಂ. ಪಿ. ವೆಂಕಟೇಶ್ —ಎಲ್ಲದಕ್ಕೂ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದಕ್ಕೆ ಈ ಪ್ರಶ್ನೆಗೂ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಾರೇನೋ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರನ್ನು ಪರಿಶೀಲನಾ ಮಂತ್ರಿ ಎಂದು ನೇಮಕ ಮಾಡಬೇಕು. ಅವರ ಇಲಾಖೆ ಎಂದರೆ ಪರಿಶೀಲನಾ ಇಲಾಖೆ.

ಅಧ್ಯಕ್ಷರು.—ಶ್ರೀಮತಿ ದಮಯಂತಿ ಬೋರೇಗೌಡ ಅವರ ಪ್ರಶ್ನೆಗೆ ಉತ್ತರವನ್ನು ಕೊಡಲು ಮಾನ್ಯ ಮಂತ್ರಿಯವರು ಟೈಮ್ ಕೇಳಿದ್ದಾರೆ.

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಡುವುದು ಅಷ್ಟೇನೂ ಕಷ್ಟಕರವಾದುದಲ್ಲ. ಆದರೂ ಏಕೆ ನಿಧಾನವಾಗುತ್ತದೆ ?

ಅಧ್ಯಕ್ಷರು —ಯಾವ ಸದಸ್ಯರು ಆಗಲೇ ಇರಲಿಲ್ಲವೋ ಅಂಥವರುಗಳ ಹೆಸರುಗಳನ್ನು ಮತ್ತೊಮ್ಮೆ ಕರೆಯುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ರಮಾನಾಥ ರೈ ಮತ್ತು ಶ್ರೀ ಯಂಕಾನಾಯಕ್‌ರವರು ಸಭೆಯಲ್ಲಿ ಹಾಜರಿರಲಿಲ್ಲ.)

ಪರಪನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಹಾಸ್ಟೆಲ್ ಕಟ್ಟಡದ ಬಗ್ಗೆ

೬೦೨. ಶ್ರೀ ಬಿ. ಹೆಚ್. ಯಂಕಾನಾಯ್ಕ (ಪರಪನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು ಯಾವ ವರ್ಷ ಆಡಿಗಲ್ಲು ಹಾಕಲಾಯಿತು ?

ಆ) ಈಗ ಕಟ್ಟಡ ಯಾವ ಹಂತದಲ್ಲಿದೆ ?

ಇ) ಈ ಕಟ್ಟಡವನ್ನು ಎಂದು ಪೂರ್ಣಗೊಳಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ೧೯೮೬ರಲ್ಲಿ

ಆ) ಈಗ ಕಟ್ಟಡವು ಪ್ಲಿಂತ್ ಲೆವೆಲ್‌ವರೆವಿಗೂ ಬಂದಿದೆ.

ಇ) ಶೀಘ್ರವಾಗಿ ಮುಗಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್ —ನಮ್ಮ ತಾಲ್ಲೂಕಿನಲ್ಲಿ ಹರಿಜನರ ಮಕ್ಕಳಿಗೆ ಒಂದು ಹಾಸ್ಟೆಲ್ ಕಟ್ಟಡ ಕಟ್ಟಬೇಕೆಂದು ಹಿಂದಿನ ಸರ್ಕಾರ ಇದ್ದಾಗ ಆಡಿಗಲ್ಲು ಹಾಕಲಾಗಿತ್ತು. ಆದರೆ ಈವರೆಗೂ ಆ ಕಟ್ಟಡದ ಕಾರ್ಯ ಆರಂಭವಾಗಿಲ್ಲ. ಇದರ ಬಗ್ಗೆ ಜಿಲ್ಲಾಪರಿಷತ್ತಿನವರು ಕ್ರಮ ತೆಗೆದುಕೊಳ್ಳಬೇಕೇ ಅಥವಾ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಕ್ರಮ ತೆಗೆದುಕೊಳ್ಳಬೇಕೇ ಎಂದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಶಿವಣ್ಣ.—ಈ ಕಟ್ಟಡದ ಯೋಜನೆಗೆ ಸರ್ಕಾರವೇ ೧ ಲಕ್ಷ ರೂಪಾಯಿಗಳ ಒಂದು ಯೋಜನೆಯೆಂದು ತಯಾರು ಮಾಡಿ ಹಣವನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ ೧೭ ಸಾವಿರದ ೫೦೦ ರೂಪಾಯಿಗಳನ್ನು ವಿನಿಯೋಗ ಮಾಡಿ ಕೆಲಸವನ್ನು ಪ್ರಾರಂಭ ಮಾಡಲಾಗಿದೆ.